ಶ್ರೀ ಜಿ. ಪುಟ್ಟಸ್ವಾಮಿಗೌಡ : ಅನುದಾನ ರಹಿತ ಷರತ್ತಿಗೆ ಒಳಪಟ್ಟು ಮಂಜೂರು ಮಾಡಿದ್ದರೂ ಒಂದು ವೇಳೆ ಮಾರ್ಪಾಡು ಮಾಡಬಹುದು. ಆಗ ನಾವು ಒತ್ತಡಕ್ಕೆ ಮಣಿಯಬೇಕಾಗುತ್ತದೆ ಎನ್ನುವ ಪ್ರಶ್ನೆ ಇವತ್ತು ನಮ್ಮ ಮುಂದೆ ಇಲ್ಲ. ಮುಂದೆ ಏನು ಬರುತ್ತದೆ ಎನ್ನತಕ್ಕಂಥಾದ್ದನ್ನು ನಾವು ನೋಡಬೇಕಾಗಿಲ್ಲ ಎಲ್ಲಾ ನಿಯಮಗಳ ಅನುಗುಣವಾಗಿ ಮಂಜೂರು ಮಾಡಿದ್ದೇವೆ. ಕಾನೂನು ವೈಲೆಟ್ ಮಾಡಿಲ್ಲ ಎನ್ನುವ ಮಾತನ್ನು ತಿಳಿಸುತ್ತೇನೆ.

ಅಧ್ಯಕ್ಷರು : ಶಿವನಂಜಪ್ಪನವರೇ ತಮ್ಮ ಪ್ರಶ್ನೆಯನ್ನು 27ನೇ ತಾರೀಖಿಗೆ ಹಾಕುತ್ತೇನೆ. ಅವರು ನನಗೆ ಬಂದು ತಿಳಿಸಿ ಹೋಗಿದ್ದಾರೆ.

ಸಾರ್ವಜನಿಕ ಗ್ರಂಥಾಲಯಕ್ಕೆ ಖಾಯಂ ನಿರ್ದೇಶಕರು

3393 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ್) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಖಾಯಂ ನಿರ್ದೇಶಕರು ಇಲ್ಲದೆ ಆ ಇಲಾಖೆಯ ಪ್ರಗತಿ ಕಾಣುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ; ಆ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಇ) ಸಾರ್ವಜನಿಕ ಗ್ರಂಥಾಲಯಗಳು ಸಿಬ್ಬಂದಿ ಕೊರತೆಗಳಿಂದಾಗಿ ಸರಿಯಾಗಿ ನಡೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) 1978 ರಲ್ಲಿ ಸರ್ಕಾರವು ಸಿಬ್ಬಂದಿ ಮಂಜೂರಾತಿಗಾಗಿ ನಿಯಮಗಳನ್ನು ರೂಪಿಸಿದ್ದರೂ ಸಹ ಅದರ ಪ್ರಕಾರ ಹುದ್ದೆಗಳನ್ನು ಏಕೆ ಮಂಜೂರು ಮಾಡಿರುವುದಿಲ್ಲ?

ಶ್ರೀ ಎಂ.ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಪ್ರಗತಿ ಕುಂಠಿತಗೊಂಡಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಬಂದಿದೆ.

ಈ) 1978 ರ ಸಿಬ್ಬಂದಿ ನಿಯಮಾವಳಿ ಪ್ರಕಾರ ಹುದ್ದೆಗಳ ಮಂಜೂರಾತಿಯ ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಪಿ. ಬಸವರಾಜು : ಅಧ್ಯಕ್ಷರೆ, ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಖಾಯಂ ನಿರ್ದೇಶಕರಿಲ್ಲದೆ ಆ ಇಲಾಖೆಯು ಪ್ರಗತಿ ಕಾಣುತ್ತಿಲ್ಲ ಎಂಬುದರ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದೇನೆ. ಅದೇ ರೀತಿಯಲ್ಲಿ ಸಾರ್ವಜನಿಕ ಗ್ರಂಥಾಲಯಗಳ ಸಿಬ್ಬಂದಿ ಕೊರತೆಯಿಂದಾಗಿ ಸರಿಯಾಗಿ ನಡೆಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೆ. ನಿರ್ದೇಶಕರಿಲ್ಲದೆ ಪ್ರಗತಿ ಕುಂಠಿತವಾಗಿಲ್ಲವೆಂದು ಉತ್ತರ ಬಂದಿದೆ. ಮತ್ತು ಈ ಸಿಬ್ಬಂದಿ ಕೊರತೆ ಸರ್ಕಾರದ ಗಮನಕ್ಕೆ ಬಂದಿದೆಯೆಂದು ಉತ್ತರ ಕೊಟ್ಟಿದ್ದಾರೆ. ಅಧ್ಯಕ್ಷರೆ, ತಮಗೆ ಗೊತ್ತಿದ್ದ ಹಾಗೆ ಸಾರ್ವಜನಿಕ ಗ್ರಂಥಾಲಯ ಇಲಾಖೆಯು ಸಾರ್ವಜನಿಕರಿಗೆ ಬಹಳ ಮಹತ್ವವುಳ್ಳ ಒಂದು ಇಲಾಖೆ. ಗ್ರಂಥಾಲಯಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಬೆಳೆಸಬೇಕಾದ ಒಂದು ಅವಶ್ಯಕತೆ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಲೈಬ್ರರಿಗಳು ಪ್ರಾರಂಭವಾಗಿ

ಅದು ಮಾಡಲಿಕ್ಕಾಗುವುದಿಲ್ಲ. ಈ ಒಂದು ಇಲಾಖೆ ಸರ್ವಸನ್ನದ್ಧವಾಗಿರಬೇಕು. ಅದಕ್ಕೆ ಬೇಕಾದ ನಿರ್ದೇಶಕರು ಇರಬೇಕಾಗುತ್ತದೆ. ಕಳೆದ ಎರಡು ವರ್ಷಗಳಿಂದ ಆ ಇಲಾಖೆಗೆ ನಿರ್ದೇಶಕರಿಲ್ಲದೆ ಇರುವುದರಿಂದ ಪ್ರಗತಿ ಕುಂಠಿತವಾಗಿದೆ. ಸುಮಾರು ಗ್ರಾಮಾಂತರ...

ಅಧ್ಯಕ್ಷರು : ಕ್ವೊಶ್ಚನ್ ಕ್ವೊಶ್ಚನ್.

ಶ್ರೀ ಪಿ. ಬಸವರಾಜು : ಅಧ್ಯಕ್ಷರೆ, ಆದ್ದರಿಂದ ಆ ಇಲಾಖೆಗೆ ಯಾವಾಗ ನಿರ್ದೇಶಕರನ್ನು ನೇಮಕ ಮಾಡುತ್ತೀರಿ? ಮತ್ತು ಏನು ಕೊರತೆ ಬಂದಿರುವ ಸಿಬ್ಬಂದಿ ವರ್ಗ ಇದೆ, ಅದರ ನೇಮಕಾತಿ ಮಾಡಲಿಕ್ಕೆ ಯಾವ ಕ್ರಮ ತೆಗೆದುಕೊಳ್ಳುತ್ತೀರೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಶಿಕ್ಷಣ ಸಚಿವರ ಪರವಾಗಿ): 1986ನೇ ಇಸವಿಯಲ್ಲಿ ನಿರ್ದೇಶಕರನ್ನು ಜೇಷ್ಯತಾ ಆಧಾರದ ಮೇಲೆ ಸರ್ಕಾರ ನೇಮಕ ಮಾಡಿತ್ತು. ಆದರೇ ಅದರಲ್ಲಿ ದೋಷ ಇತ್ತೆಂದು ನ್ಯಾಯಾಲಯಕ್ಕೆ ಹೋಗಿದ್ದ ಪರಿಣಾಮವಾಗಿ 1990 ರಲ್ಲಿ ನ್ಯಾಯಾಲಯ ಒಂದು ಆಜ್ಞೆಯನ್ನು ಕೊಡುವುದರ ಜೊತೆಗೆ ಕೆಲವು ಗೈಡ್ ಲೈನ್ಸ್ ಕೂಡ ಕೊಟ್ಟಿದೆ. ಆ ಹಿನ್ನಲೆಯಲ್ಲಿ ಸರ್ಕಾರ ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದೆ. ಕೂಡಲೇ ಜೇಷ್ಯತಾ ಪಟ್ಟಿಯನ್ನು ಪ್ರಕಟಣೆ ಮಾಡುವ ಮೂಲಕ ಇಲಾಖೆಯಿಂದ ಭಡ್ತಿ ಕೊಟ್ಟು ನಿರ್ದೇಶಕರನ್ನು ನೇಮಕ ಮಾಡತಕ್ಕಂಥ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಮತ್ತೊಂದು ಮಾತನ್ನು ಹೇಳಬಯಸುತ್ತೇನೆ. ಸಿಬ್ಬಂದಿ ಕೊರತೆ ನೀಗಲು 1810 ಜನ ಬೇಕು ಅನ್ನತಕ್ಕಂಥಾದ್ದನ್ನು ಇಲಾಖೆಯವರು ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಆರ್ಥಿಕ ನಿರ್ಬಂಧದ ಪರಿಸ್ಥಿತಿಯಿಂದಾಗಿ ಇವರಿಗೆ ಮಂಜೂರಾತಿ ಸಿಗಲಿಲ್ಲ. ಈಗ ಇಲಾಖೆಯವರು ಅರ್ಥ ಇಲಾಖೆಯವರ ಮೇಲೆ ಇದರ ಅಗತ್ಯತೆಯನ್ನು ಒತ್ತಿ ಹೇಳುವ ಮೂಲಕ ಅದರ ಮಂಜೂರಾತಿಯನ್ನು ಶೀರ್ಘದಲ್ಲೇ ಪಡೆಯುವವರಿದ್ದಾರೆ. ನಂತರ ಎಲ್ಲಾ ಖಾಲಿ ಇರತಕ್ಕಂಥ ಸ್ಥಾನಗಳನ್ನು ಭರ್ತಿ ಮಾಡಿ ಲೈಬ್ರರಿಯ ಉಪಯೋಗ ಎಲ್ಲರಿಗೂ ಸಿಗುವಂಥ ರೀತಿಯಲ್ಲಿ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ.

ಅಧ್ಯಕ್ಷರು : ಶ್ರೀ ಎನ್. ತಮ್ಮಣ್ಣ ಅವರ ಪ್ರಶ್ನೆ ಹೆಲ್ಡ್ ಓವರ್ ಆಗಿದೆ. ಇದನ್ನು 27ನೇ ತಾರೀಖು ಹಾಕುತ್ತೇನೆ.

ಚಿತ್ತಾಪುರ ತಾಲ್ಲೂಕಿನ ಶಾಲೆಗಳಲ್ಲಿ ಶಿಕ್ಷಕರಿಲ್ಲದಿರುವುದು

3348 : ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿತ್ತಾಪುರ ತಾಲ್ಲೂಕಿನಲ್ಲಿ ಪ್ರಾಥಮಿಕ ಶಾಲೆ, ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ಉಪನ್ಯಾಸಕರು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದಿರುವುದು ಸರ್ಕಾರವ ಗಮನಕ್ಕೆ ಬಂದಿದೆಯೇ?*

ಆ) *ಮೇಲ್ಕಂಡ ಶಾಲೆಗಳಲ್ಲಿ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದರೂ ಕೂಡ ಇಲ್ಲಿಯವರೆವಿಗೂ ಪ್ರಯೋಜನವಾಗದಿರುವುದಕ್ಕೆ ಕಾರಣಗಳೇನು? ಸರ್ಕಾರ ಇದರ ಬಗ್ಗೆ ಯಾವ ಕ್ರಮ ಕೈಗೊಂಡಿದೆ?*

ಇ) *ಮೇಲ್ಕಂಡ ಪ್ರಾಥಮಿಕ ಶಾಲೆ, ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲೂ ಸರ್ಕಾರದವರು ಕೈಗೊಂಡಿರವ ಕ್ರಮವೇನು?*

ಈ) *ಚಿತ್ತಾಪುರ ತಾಲ್ಲೂಕಿನ ಪ್ರಾಥಮಿಕ ಶಾಲೆ ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?*